ಸಂಚಾರ ಹೆಚ್ಚಿರುವ ಅರಣ್ಯಗಳ ಹುಲಿಗಳು ಮನುಷ್ಯರ ಕಂಡರೆ ಕೇರ್ ಮಾಡದಷ್ಟು ಭಂಡತನ ಮತ್ತು ಸಲುಗೆ ಬೆಳೆಸಿಕೊಂಡಿವೆ. ನನ್ನ ಮಟ್ಟಿಗೆ ಈ ಬೆಳವಣಿಗೆ ಖಂಡಿತ ಒಳ್ಳೆಯದಲ್ಲ.

ಇದೆಲ್ಲಾ ಲೆಕ್ಕಾಚಾರ ಮಾಡಿಕೊಂಡೇ ನಾವು ಹುಲಿಗಳು ಸುಲಭವಾಗಿ ಸಿಗುತ್ತವೆ ಎಂದು ಮಹಾರಾಷ್ಟ್ರದ ತಡೋಬಕ್ಕೆ ಬಂದಿದ್ದು. ಆದರೆ ನಮ್ಮ ಗ್ರಹಚಾರವೇ ಇಲ್ಲಿ ಸರಿ ಇರಲಿಲ್ಲ. ಅನೇಕ ಸಲ ಇಲ್ಲಿಗೆ ಬಂದು ಹುಲಿಗಳ ಸಂಪೂರ್ಣ ಮಾಹಿತಿ ಗಳಿಸಿದ್ದ ರಿತೇಶ ನಮ್ಮ ಜೊತೆ ಇದ್ದ. ಅವನೇ ನಮ್ಮ ಮಾರ್ಗದರ್ಶಕ. ತಡೋಬಾದ ಪ್ರತಿ ಹುಲಿಯ ಜಾತಕ ಹೇಳಬಲ್ಲಷ್ಟು ಘಂಟರ್ ನಮ್ಮ ಜೊತೆ ಇದ್ದರೂ ಪ್ರಯೋಜನವಾಗಿರಲಿಲ್ಲ. ಇದೇ ಆ ರಾತ್ರಿ ಬೇಸರದಲ್ಲಿ ಮಾತಾಡುತ್ತಾ ಹಳ್ಳಿಯಿಂದ ಕಾಡಿನ ಕಡೆ ಹೊರಳಿದ್ದ ದಾರಿಯಲ್ಲಿ ಕೊಂಚ ದೂರ ಸಾಗಿದೆವು. ಆಗ ರಾತ್ರಿ ಹತ್ತರ ಅಸುಪಾಸು ಇರಬಹುದು. ಪಕ್ಕದ ಗದ್ದೆಗಳಲ್ಲಿ ಜನ ಬ್ಯಾಟರಿ ಹಿಡಿದು ಹಂದಿಗಳು ಭತ್ತದ ಗದ್ದೆಗೆ ನುಗ್ಗಬಾರದೆಂದು ಬೆದರಿಸಲು ಹಗ್ಗ ಪೋಣಿಸಿ ಬದುವಿನುದ್ದಕ್ಕೂ ಕಟ್ಟಿದ್ದ ಡಬ್ಬಗಳ ಆಗಾಗ ಜಗ್ಗಿ ಗಲಗಲ ಶಬ್ದ ಮಾಡುತ್ತಿದ್ದರು. ಡಬ್ಬಗಳ ಒಳಗೆ ಹಾಕಿದ ಕಲ್ಲುಗಳಿಂದ ಹೊರಡುವ ಶಬ್ದ ಕಾಡ ಹಂದಿಗಳ ಓಡಿಸಲು ಸಾಕಾಗುವಂತಿತ್ತು.

ನಾವು ಕೊಂಚ ಮುಂದೆ ಹೋಗುವಷ್ಟರಲ್ಲಿ ಗದ್ದೆಯ ಒಳಗಿಂದ ನಮ್ಮ ಕಡೆ ಬ್ಯಾಟರಿ ಬೆಳಕು ಬೀಸಿದ ವ್ಯಕ್ತಿಯೊಬ್ಬ, 'ಈ ಕಡೆ ಬರಬೇಡಿ. ಹಾಗೇ ಹಿಂದಕ್ಕೆ ಹೋಗಿ. ಗದ್ದೆಯ ತುದಿಯಲ್ಲಿ ಹುಲಿ ನಿಂತಿದೆ' ಎಂದು ಕೂಗಿಕೊಂಡನು. ನಮ್ಮ ಕೈಯಲ್ಲಿ ಮೊಬೈಲಿನ ಬೆಳಕು ಬಿಟ್ಟರೆ ಮತ್ತೇನೂ ಇರಲಿಲ್ಲ. ಅವರು ಹೇಳುತ್ತಿದ್ದ ಗದ್ದೆ ಕೂಡ ನಮ್ಮ ಎಡಭಾಗದ ಕಡೆಗಿತ್ತು. ಹತ್ತಿರದಲ್ಲೇ ಹುಲಿ ಇದೆ ಎಂಬ ಎಚ್ಚರಿಕೆಯ ದನಿ ಕೇಳಿದ ತಕ್ಷಣ ಮೂವರ ಕಾಲುಗಳಲ್ಲಿ ಕಂಪನ ಮೂಡಿತು. ದಂಗು ಬಡಿದು ಸುಮ್ಮನೆ ನಿಂತು ಬಿಟ್ಟೆವು. ಪರಸ್ಪರ ಮುಖ ನೋಡಿಕೊಂಡು ಇಲ್ಲಿಂದ ಬೇಗ ಜಾಗ ಕೀಳುವುದೇ ವಾಸಿಯೆಂದು ಹಿಂದಕ್ಕೆ ಹೊರಟೆವು. ಹುಲಿ ನಮ್ಮನ್ನು ಹಿಂಬಾಲಿಸುತ್ತಿರಬಹುದೆಂಬ ಗುಮಾನಿ ಹೆಚ್ಚಾಗಿ ದುರುದುರುನೆ ಕಾಲು ಹಾಕಿದೆವು. ಓಡಿ ಹೋದರೆ ಅದು ಸ್ಫೂರ್ತಿಗೊಂಡು ಛಂಗನೆ ನೆಗೆದು ಬರಬಹುದು ಆರಾಮಾಗೇ ಹೋಗೋಣ ಎಂದು ನಾನು ಸಮಾಧಾನ ಹೇಳುತ್ತಿದ್ದೆ. ಜೀವ ಬಾಯಿಗೆ ಬಂದಿದ್ದ ಮೂವರು ಪ್ರಾಣ ಉಳಿದರೆ ಸಾಕಪ್ಪ ಎನ್ನುತ್ತಾ ಅವಸರದಲ್ಲೇ ನಡೆದು ಹಳ್ಳಿಗೆ ಸಮೀಪ ಬಂದೆವು. ಅಲ್ಲೊಂದಿಷ್ಟು ಜನರು ನಿಂತಿದ್ದು ಒಂದಷ್ಟು ನಿರಾಳ ಎನಿಸಿತು.

ರಾತ್ರಿ ಹೊತ್ತು ಇಲ್ಲಿ ಓಡಾಡುವುದು ಅಪಾಯ. ಅನೇಕ ಜನ ಹಳ್ಳಿಯವರ ಪ್ರಾಣ ಇದೇ ದಾರಿಯಲ್ಲಿ ಹೋಗಿದೆ. ಬೇಗ ಹೋಗಿ ರೂಮು ಸೇರಿಕೊಳ್ಳಿ ಎಂದು ಜನ ಮತ್ತಷ್ಟು ದಿಗಿಲು ತುಂಬಿದರು. ನಾವು ತಂಗಿದ್ದ ರೆಸಾರ್ಟ್ ಮಾಲೀಕನಲ್ಲಿ ಹೋಗಿ ನಡೆದ ವಿಷಯ ಹೇಳಿದಾಗ ಅವನು ನೀವು ಹೀಗೆ ಹೋಗಿದ್ದು ಸರಿಯಲ್ಲ. ಹುಲಿಗಳು ಅನೇಕ ಸಲ ನಮ್ಮ ರೂಮಿನ ಹತ್ತಿರವೇ ಬಂದು ಹೋಗಿವೆ. ಇನ್ನು ಮುಂದೆ ಅತ್ತ ಕಡೆ ಹೋಗಬೇಡಿ ಎಂದ. ನನಗೆ ಕುತೂಹಲ ಹೆಚ್ಚಾಗಿ ಅವನ ಜೊತೆ ಮಾತಿಗೆ ಕೂತೆ.

ಅವನು ಹೇಳಿದ ಅನೇಕ ವಿಷಯಗಳು ನಡುಕ ಹುಟ್ಟಿಸುವಂತಿದ್ದವು. ಅವನ ಬಳಿ ಅಡುಗೆ ಕೆಲಸ ಮಾಡುವ ಪದ್ಮ ಎಂಬ ಹೆಣ್ಣುಮಗಳ ಕರೆದು ನಿನ್ನ ಅನುಭವ ಇವರಿಗೆ ಹೇಳು ಎಂದ. ಆಕೆ, 'ನಮ್ಮಪ್ಪ ಗದ್ದೆ ಕಾಯಲು ಹೋದಾಗ ಹುಲಿ ಹಿಡಿದು ತಿಂದಿತು. ಇದಾಗಿ ಆರು ತಿಂಗಳಾಗಿದೆ ಅಷ್ಟೆ. ಎಲ್ಲಾ ತಿಂದು ನಮ್ಮಪ್ಪನ ತಲೆ ಮಾತ್ರ ಉಳಿಸಿತ್ತು. ಅಳಿದುಳಿದ ಮೂಳೆಗಳ ಆರಿಸಿ ತಂದು ಧಪನು ಮಾಡಿದೆವು' ಎಂದು ತಣ್ಣಗೆ ಹೇಳಿದಳು. 'ಇಲ್ಲಿಯ ತನಕ ಸುತ್ತಮುತ್ತಲ ಹಳ್ಳಿಯ ತುಂಬಾ ಜಾನುವಾರುಗಳನ್ನು ಹುಲಿ ತಿಂದಿದೆ. ಅನೇಕ ಮನುಷ್ಯರನ್ನೂ ಬೇಟೆಯಾಡಿದೆ. ಕಾಡಿನಂಚಿನಲ್ಲಿ ಬದುಕುವ ನಮಗಿದು ಸಾಮಾನ್ಯ ವಿಷಯವಾಗಿ ಹೋಗಿದೆ' ಎಂದಾಗ ನಾನು ಗಾಬರಿಬಿದ್ದು ಹೋದೆ. ಎಂಥ ಅಪಾಯಕಾರಿ ಜಾಗದಲ್ಲಿ ಇವರೆಲ್ಲಾ ಬದುಕುತ್ತಿದ್ದಾರೆಂದು ಯೋಚಿಸಿಯೇ ನಡುಗಿಹೋದೆ.

ನಾವು ಹುಡುಕಿಕೊಂಡು ಹೋದಾಗ ಸಿಗದ ಹುಲಿ ರಾತ್ರಿ ಹೊತ್ತು ನಮ್ಮನ್ನೇ ಹುಡುಕಿಕೊಂಡು ಬರುವುದು ಎಂಥ ವಿಪರ್ಯಾಸ! 'ಹಗಲೊತ್ತು ಸಿಗೋದು ಬಿಟ್ಟು ರಾತ್ರಿ ಬರ್ತಾ ಇದೆಯಲ್ಲ ಸರ್. ಏನ್ ಪಾಪಿ ನನ್ಮಂಗದು ಇದು. ಅಷ್ಟು ದೂರದಿಂದ ಪಟ ತೆಗೆಯೋರು ಬಂದಿದ್ದಾರೆ. ಒಳ್ಳೇ ಪೋಸು ಕೊಡಬೇಕು ಅನ್ನೋ ಗ್ಯಾನಾನೆ ಇಲ್ಲಿನ ಹುಲಿಗೆ ಇಲ್ವಲ್ಲ. ನಾಳೆ ಬೆಳಿಗ್ಗೆ